ಸಂಯುಕ್ತ ಕರ್ನಾಟಕ ಶುಕ್ರವಾರ, 21, ಅಕ್ಟೋಬರ್, 2016, ದಾವಣಗೆರೆ 5

# ಗೊಂದಿ ಆಣೆಕಟ್ಟು ಪುನರುಜ್ಜೀವನ

ಶಿವಮೊಗ್ಗ: ಭದ್ರಾವತಿ ತಾಲ್ಲೂಕಿನ ಗೊಂದಿ ಅಣೆಕಟ್ಟೆಯನ್ನು 130 ಕೋಟಿ ರೂ. ಏಷ್ಯಾ ಅಭಿವೃದ್ಧಿ ಬ್ಯಾಂಕಿನ ಅನುದಾನದಲ್ಲಿ ಪುನರುಜ್ಜೀವನ ಕೈಗೊಂಡಿದೆ ಎಂದು ಮುಖ್ಯ ಇಂಜಿನಿಯರ್ ಆರ್.ಪಿ. ಕುಲಕರ್ಣಿ ಹೇಳಿದರು.

ಕರ್ನಾಟಕ ನೀರಾವರಿ ನಿಗಮ, ಭದ್ರಾ ಕಾಡಾ, ಯೋಜನಾ ಸಮಾಲೋಚಕ ಸಂಸ್ಥೆಯಾದ ಎಸ್‌ಎಂಇಸಿ ಇಂಡಿಯಾ ವತಿಯಿಂದ ಇಲ್ಲಿನ ಕಾಡಾ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಗೊಂದಿ ನೀರು ಬಳಕೆದಾರರ ಸಹಕಾರ ಸಂಘಗಳ ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮಾದರಿ ಯೋಜನೆಯನ್ನಾಗಿ ರೂಪಿಸುವ ಜವಾಬ್ದಾರಿ ನೀರು ಬಳಕೆದಾರ ಸಂಘಗಳ ಮೇಲಿದೆ. ಪರಿಣಾಮಕಾರಿ ಭಾಗವಹಿಸುವಿಕೆಯ ಮೇಲೆ ಇದರ ಯಶಸ್ಸು ನಿಂತಿದೆ ಎಂದು ಹೇಳಿದರು.

ನೂರು ವರ್ಷಗಳ ಹಿಂದೆ ನಿರ್ಮಾಣವಾಗಿರುವ ಗೊಂದಿ ಅಣೆಕಟ್ಟೆಯು ನಮ್ಮ ಪೂರ್ವಜರು ನಮಗೆಬಿಟ್ಟುಹೋಗಿರುವಅತ್ಯಮೂಲ್ಯ ಆಸ್ತಿ. ಅದನ್ನು ಜೋಪಾನವಾಗಿ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ನೀರು ಬಳಕೆದಾರ ಸಹಕಾರ ಸಂಘಗಳಿಗೆ ಯೋಜನೆಯ ಅರಿವು ಮೂಡಿಸಿ, ಅವರು ಅನುಷ್ಠಾನದ ಎಲ್ಲ ಹಂತಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವ ಸಲುವಾಗಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಭದ್ರಾ ಕಾಡಾ ಆಡಳಿತಾಧಿಕಾರಿ ಅಂಬಾಡಿ ಮಾಧವ್ ಮಾತನಾಡಿ, ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಭತ್ತ ಹೊರತುಪಡಿಸಿ ಪರ್ಯಾಯ ಬೆಳೆಗಳಾದ ಹೂ, ಶೇಂಗಾ, ಹೆಸರು, ಮೆಕ್ಕೆಜೋಳ ಇತ್ಯಾದಿ ಬೆಳೆಗಳನ್ನು ಬೆಳೆಯಲು ಮುಂದಾಗಬೇಕು. ಭತ್ತವನ್ನು ಶ್ರೀ ಪದ್ಧತಿಯಲ್ಲಿ ಬೆಳೆದರೆ ನೀರು, ಬೀಜ ಹಾಗೂ ಖರ್ಚಿನಲ್ಲಿ ಉಳಿತಾಯವಾಗಲಿದೆ ಎಂದು ಸಲಹೆ ನೀಡಿದರು.

ಹೊಸಳ್ಳಿ ನೀರುಬಳಕೆದಾರ ಸಹಕಾರ ಸಂಘದ ವೀರೇಶ್, ಹೊಳೆಭೈರೇನಹಳ್ಳಿ ಪ್ರಗತಿಪರ ರೈತ ಕುಮಾರ್ ನಾಯ್ಕ್, ಸಹಾಯಕ ಅಭಿಯಂತರ ಉಮೇಶ್, ಮಾತನಾಡಿದರು. ಅಧೀಕ್ಷಕ ಇಂಜಿನಿಯರ್ ಬಸವಣ್ಣ, ಭದ್ರಾ ಕಾಡಾ ಕಾರ್ಯಪಾಲಕ ಇಂಜಿನಿಯರ್ ಶಂಭಯ್ಯ, ಭದ್ರಾ ಕಾಡಾ ಉಪ ಆಡಳಿತಾಧಿಕಾರಿ ರಾಜಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಟರಾಜ್, ರುದ್ರೇಶ್ ನಾಯಕ್ ಮತ್ತು ಹರೀಶ್, ಕರ್ನಾಟಕ ನೀರಾವರಿ ನಿಗಮದ ಸಹಾಯಕ ಇಂಜಿನಿಯರ್ ಅವಿನಾಶ್, ಯೋಜನಾ ಸಮಾಲೋಚಕ ಸಂಸ್ಥೆ ಇಂಜಿನಿಯರ್ ಎಸ್.ನಂಜುಂಡಸ್ವಾಮಿ, ಬಾಲಚಂದ್ರ ಕುರುಪ್, ನಾಗೇಶ್ವರ ರಾವ್ ಇನ್ನಿತರರಿದ್ದರು.

ಮಲ್ಲಿಕಾರ್ಜುನ ನಿರೂಪಿಸಿದರು. ಮಂಜುಳಾ ವಂದಿಸಿದರು.